ದಿನಾಂಕಃ-08-12-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ- ಶ್ರೀ.ಡಿ.ಐ.ಕೆ ವಕೀಲರಿಂದ ಪ್ರತಿವಾದಿ ಪರವಾಗಿ**

ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಮರಾಠಿ ಮತ್ತು ಆಂಗ್ಲ ಭಾಷೆ ಬರುತ್ತಿದ್ದು ಶ್ರೀ.ಡಿ.ಟಿ.ಬಿ ವಕೀಲರನ್ನು ಅನುವಾದಕರು ಎಂದು ನೇಮಿಸಲಾಯಿತು.

ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ಹಾಜರಪಡಿಸಿದ್ದು, ಅದರಲ್ಲಿ ಬರೆದ ವಿಷಯಗಳು ಸರಿ ಇರುತ್ತವೆ. ಸದರಿ ವಿಷಯವನ್ನು ತಿಳಿದುಕೊಂಡು ಸಾಕ್ಷ್ಯ ಪ್ರಮಾಣ ಪತ್ರದ ಮೇಲೆ ನನ್ನ ಸಹಿ ಮಾಡಿರುತ್ತೇನೆ. ಅದರಲ್ಲಿರುವ ಎಲ್ಲ ಸಂಗತಿಗಳು ನಿಜ ಸಂಗತಿಗಳಿರುತ್ತವೆ.

ಸಾಕ್ಷಿಗೆ ನಿಡಿ-3 ನ್ನು ತೋರಿಸಿದ್ದು ಅದರಲ್ಲಿನ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದು ಅದನ್ನು ನಿಡಿ-3 ಎ ಎಂದು ಗುರುತಿಸಲಾಯಿತು. ನಾನು ಶಾಂತಾಬಾಯಿಯವರನ್ನು ನೋಡಿದ್ದೆನು. ಶಾಂತಾಬಾಯಿ ಎಂದರೆ ನಮ್ಮ ತಾಯಿಯ ತಂಗಿ. ಶ್ರೀಮತಿ.ಶಾಂತಾಬಾಯಿರವರು ದಾಖಲೆಗಳಿಗೆ ಸಹಿ ಹಾಕುತ್ತಿದ್ದರು. ನಿಡಿ-3 ರಲ್ಲಿ ಪ್ರತಿ ಪುಟಕ್ಕೂ ಶ್ರೀಮತಿ.ಶಾಂತಾಬಾಯಿ ಇವರ ಸಹಿಗಳು ಇದ್ದು ಅವುಗಳನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ಅದನ್ನು ವಾದಿ ಪರ ವಕೀಲರ ತಕರಾರು ಮಾಡಿದ್ದು ತಕರಾರಿಗೆ ಒಳಪಟ್ಟು ಅದನ್ನು ನಿಡಿ-3 ಬಿ ಎಂದು ಗುರುತಿಸಲಾಯಿತು. ಇನ್ನೊಬ್ಬ ಸಾಕ್ಷಿ ಸುಜೀತ ಶ್ರೀಕಾಂತ ಶಹಾ ಇವರ ಸಹಿಯನ್ನು ಸಾಕ್ಷಿ ಗುರುತಿಸುತ್ತಾರೆ. ಸದರಿ ಸಹಿಯನ್ನು ಶ್ರೀ.ಎಮ್.ಜಿ.ಕೆ ವಕೀಲರ ತಕರಾರಿಗೆ ಒಳಪಟ್ಟು ನಿಡಿ-3 ಸಿ ಎಂದು ಗುರುತಿಸಲಾಯಿತು. ಶ್ರೀ.ಟಿ.ಎಲ್.ಕವಟಕೊಪ್ಪ ವಕೀಲರು ದಸ್ತೂರ ಅಂತಾ ಸಹಿ ಮಾಡಿದ್ದು ಸಾಕ್ಷಿ ಅದನ್ನು ಗುರುತಿಸುತ್ತಾರೆ. ಅದನ್ನು ಶ್ರೀ.ಎಮ್.ಜಿ.ಕೆ ವಕೀಲರ ತಕರಾರಿಗೆ ಒಳಪಟ್ಟು ನಿಡಿ-3 ಡಿ ಎಂದು ಗುರುತಿಸಲಾಯಿತು.

ಶ್ರೀ.ಎಮ್.ಜಿ.ಕೆ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿ ರುವರು.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ

ಸಾಕ್ಷಿಯ ಸಹಿ